ಕರ್ನಾಟಕ ಸರ್ಕಾರ

ಸಂಖ್ಯೆ: ಪಪೂಶಿ/ಇ-ಆಡಳಿತ/ವಿ.ಬಿ/2014-15

ನಿರ್ದೇಶಕರ ಕಚೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
ಮಲ್ಲೇಶ್ವರಂ 18ನೇ ಕ್ರಾಸ್,
ಸಂಪಿಗೆ ರಸ್ತೆ, ಬೆಂಗಳೂರು-12.
ದಿನಾಂಕ: 08-01-2015

ಸುತ್ತೋಲೆ

ವಿಷಯ: ಐ.ಸಿ.ಟಿ. ಯೋಜನೆಯಡಿ ಅನುಷ್ಠಾನಗೊಳಿಸಿರುವ ಸರ್ಕಾರಿ ಪ ಪೂ ಕಾಲೇಜುಗಳಲ್ಲಿ ವಿದ್ಯುತ್ ಬಿಲ್ಲುಗಳನ್ನು ಕಾಲೇಜಿನ ಸಂಚಿತ ನಿಧಿಯಿಂದ ಭರಿಸುವ ಕುರಿತು.

****

ಪದವಿ ಪೂರ್ವ ಶಿಕ್ಷಣ ನಿರ್ದೇಶಕರು ಇತ್ತೀಚೆಗೆ ಅನೇಕ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಭೇಟಿ ನೀಡಿದಾಗ, ಐ.ಸಿ.ಟಿ. ಯೋಜನೆಯಡಿ ಅನುಷ್ಠಾನಗೊಳಿಸಿದ ರಾಜ್ಯದ 708 ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಬಹಳಷ್ಟು ಕಾಲೇಜುಗಳು ಐ.ಸಿ.ಟಿ. ಗಣಕ ಕೊಠಡಿಯ ವಿದ್ಯುತ್ ಬಿಲ್ಲುಗಳನ್ನು ಕೆ.ಪಿ.ಟಿ.ಸಿ.ಎಲ್.ಗೆ ಪಾವತಿ ಮಾಡದಿರುವುದು ಕಂಡುಬಂದಿರುತ್ತದೆ. ಇದರಿಂದ ವಿದ್ಯಾರ್ಥಿಗಳು ಗಣಕಾಧಾರಿತ ಶಿಕ್ಷಣದಿಂದ ವಂಚಿತರಾಗಿರುವುದು ಕಂಡುಬಂದಿದೆ.

ಮೇಲ್ಕಂಡ ಹಿನ್ನಲೆಯಲ್ಲಿ ಕೇಂದ್ರ ಸರ್ಕಾರದ ಐ.ಸಿ.ಟಿ. ಯೋಜನೆಯಡಿ ಗಣಕಾಧಾರಿತ ಶಿಕ್ಷಣವನ್ನು ಅನುಷ್ಠಾನಗೊಳಿಸಿರುವ ರಾಜ್ಯದ 708 ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಗಣಕ ಕೊಠಡಿಯ ವಿದ್ಯುತ್ ಬಿಲ್ಲುಗಳನ್ನು ಹಾಗೂ ಬಾಕಿಯಿರುವ ವಿದ್ಯುತ್ ಬಿಲ್ಲುಗಳನ್ನು ಕಾಲೇಜಿನ ಸಂಚಿತ ನಿಧಿಯಿಂದ ಭರಿಸಲು **ವಿಶೇಷ ಪ್ರಕರಣವೆಂದು ಪರಿಗಣಿಸಿ** ಅನುಮತಿ ನೀಡಲಾಗಿದೆ.

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ

ಪ್ರತಿಗಳು:

1. ಐ.ಸಿ.ಟಿ. ಯೋಜನೆಯನ್ನು ಅನುಷ್ಠಾನಗೊಳಿಸಿರುವ ರಾಜ್ಯದ 708 ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಿಗೆ - ಸೂಕ್ತ ಕ್ರಮಕ್ಕಾಗಿ.
2. ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪನಿರ್ದೇಶಕರಿಗೆ - ಮಾಹಿತಿಗಾಗಿ
3. ಜಂಟಿ ನಿರ್ದೇಶಕರು, ಆಡಳಿತ / ಪರೀಕ್ಷಾ / ಶೈಕ್ಷಣಿಕ / ಮಾನ್ಯತೆ

ಪ್ರತಿಯನ್ನು ಮಾಹಿತಿಗಾಗಿ:

1. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಶ್ರೀ ಶ್ರೀನಿವಾಸಮೂರ್ತಿ, ಇ-ಆಡಳಿತ ಸಂಯೋಜನಾಧಿಕಾರಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಶ್ರೀ ಐ.ಎಫ್. ಮಾಗಿ, ಸರ್ಕಾರದ ಅಧೀನ ಕಾರ್ಯದರ್ಶಿಗಳು(ಯೋಜನೆ), ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.